ಶ್ರೀ ಬಿ. ಎಸ್. ಯಡಿಯೂರಪ್ಪ.—ಸಾಮಾನ್ಯವಾಗಿ ಹರಿಜನ ಬಸದಿಗಳಲ್ಲಿ ಹೊಸದಾಗಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಕಲ್ಪಿಸುವ ಸಂದರ್ಭದಲ್ಲಿ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ. ಹರಿಜನ ಕೇರಿಗಳಲ್ಲಿ ಈ ಕಡೆ ನಾಲ್ಕು ಮನೆಗಳು ಇರುತ್ತವೆ. ಆ ಕಡೆ ನಾಲ್ಕು ಮನೆಗಳಿರುತ್ತವೆ. ಆ ನಾಲ್ಕು ಮನೆಗಳ ಮಧ್ಯದಲ್ಲಿ ಕಟ್ಟಡಗಳನ್ನು ಹಾಕಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಆದರೆ ಇಲಾಖೆಯವರು ಆ ರೀತಿ ಮಾಡುತ್ತಿಲ್ಲ. ಅದರ ಬಗ್ಗೆ ಸಾಕಷ್ಟು ಸಾರಿ ತಮ್ಮ ಗಮನಕ್ಕೆ ತಂದಿದ್ದೇನೆ. ಮೂರು ತಿಂಗಳ ಹಿಂದೆ ಆಮೆಟ್ಟಿಕೊಪ್ಪ ಎಂಬಲ್ಲಿ ಈ ತರಹ ಕಂಬಗಳನ್ನು ಹಾಕುತ್ತಿರಬೇಕಾದರೆ ಸ್ಥಳದಲ್ಲೇ ನಿಂತು ಇಲ್ಲೇ ಕಂಬಗಳನ್ನು ಹಾಕಬೇಕೆಂದು ಹೇಳಿದರೂ ಇದುವರೆವಿಗೂ ಅಲ್ಲೆ ಕಂಬಗಳನ್ನು ಹಾಕೇ ಇಲ್ಲ. ಅದರ ಬಗ್ಗೆ ಕಟ್ಟುನಿಟ್ಟಾದ ಆದೇಶವನ್ನು ಅಧಿಕಾರಿಗಳಿಗೆ ನೀಡುತ್ತೀರಾ ? ಹೊಸದಾಗಿ ಹರಿಜನ ಬಸದಿಗಳಿಗೆ ವಿದ್ಯುತ್‌ನ್ನು ಒದಗಿಸುವಾಗ ಇರತಕ್ಕಂತಹ ರೂಲ್ಸ್‌ನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಅಗತ್ಯ ಇರುವಷ್ಟು ಕಂಬಗಳನ್ನು ಹಾಕಿಂವ ಬಗ್ಗೆ ಅಧಿಕಾರಿಗಳಿಗೆ ಆದೇಶವನ್ನು ನೀಡುತ್ತೀರಾ ? ನಂತರ ಮೈನ್ ಲೈನ್ ಏನಿದೆ ಇದರ ಬಗ್ಗೆ ಹೇಳುವುದಾದರೆ, ಇದು ಆ ಕೇರಿಗಳಿಗೆ ದೂರ ಇರುವುದರಿಂದ ಭಾಗ್ಯ ಜ್ಯೋತಿ ಯೋಜನೆ ಪ್ರಕಾರ ದೀಪಗಳನ್ನು ಹಾಕಿಸಬೇಕಾದರೆ ಅಂತರ ಜಾಸ್ತಿ ಇರುವುದರಿಂದ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗುವುದಿಲ್ಲ ಎಂಬ ದೂರು ಇದೆ. ಆದ್ದರಿಂದ ಅದರ ಬಗ್ಗೆಯೂ ಕಾನೂನನ್ನು ರಿಲ್ಯಾಕ್ಸ್ ಮಾಡಿ ಆ ಹರಿಜನರ ಮನೆಗಳಿಗೆ ವಿದುಚ್ಛಕ್ತಿಯನ್ನು ಒದಗಿಸಿ ಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ವಿಚಾರ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಒಟ್ಟು ಇರುವ ೪೩ ಹರಿಜನ ಬಸದಿಗಳಲ್ಲಿ ಕೇವಲ ೧೧ಕ್ಕೆ ಮಾತ್ರ ವಿದ್ಯುತ್ ದೊರಕಿಸಲಾಗಿದೆ. ಈಗಾಗಲೇ ೧೫–೨೦ ವರ್ಷಗಳಿಂದ ಆ ಊರುಗಳಲ್ಲಿ ವಿದ್ಯುತ್ ಸಂಪರ್ಕ ದೊರೆತಿದ್ದು ಹರಿಜನ ಬಸ್ತಿಗಳಲ್ಲಿ ಅದು ಆಗದೇ ಉಳಿದಿದೆ. ಈ ವರ್ಷ ಇವುಗಳನ್ನು ಪೂರ್ಣಗೊಳಿಸಲು ಆದೇಶ ಕೊಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್. – ಇಂತಿಂಥ ಜಿಲ್ಲೆಯಲ್ಲಿ ತಾಲ್ಲೂಕಿನಲ್ಲಿ ಇಷ್ಟು ವಿದ್ಯುದೀಕರಣ ಮಾಡಬೇಕೆಂಬ ಟಾರ್ಜೆಟ್ ಇರುತ್ತದೆ. ಪೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಗೆ ಈ ಬಗ್ಗೆ ಬರೆದಿರುತ್ತೇವೆ. ಮೊದಲು ನಾವು ಸ್ಯಾಂಕ್ಷನ್ ಆಗಿರತಕ್ಕ ಟಾರ್ಜೆಟ್ ಏನಿದೆ ಅದನ್ನು ಮುಗಿಸುವುದಕ್ಕೆ ಪ್ರಯತ್ನ ಪಡುತ್ತೇವೆ. ಉಳಿದ ಹಳ್ಳಿಗೆ ಆರ್ಥಿಕ ಲಭ್ಯತೆ ನೋಡಿ ಈ ವರ್ಷದಲ್ಲಿ ಆ ಕೆಲಸ ಆಗುವುದಾದರೆ ಆ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಪಾಂಡವಪುರ ಹಾಗೂ ನಾಗಮಂಗಲದ ತಾಲ್ಲೂಕುಗಳಲ್ಲಿ ಅಭಯಾರಣ್ಯದ ಅಭಿವೃದ್ಧಿ

೧೩೭೭. ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೇಲುಕೋಟೆ ಅಭಯಾರಣ್ಯದ ವಿಸ್ತೀರ್ಣ ಎಷ್ಟು, ಆ ಪೈಕಿ ಪಾಂಡವಪುರ ಮೇಲುಕೋಟೆ ಹಾಗೂ ನಾಗಮಂಗಲ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣ ಇವೆ ?

ಆ) ಈ ಅಭಯಾರಣ್ಯದ ಅಭಿವೃದ್ಧಿಗೆ ಇದುವರೆಗೆ ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ಹಾಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ?

ಇ) ಈ ಕಾಡಿನಲ್ಲಿ ಕೆಲವು ನೀಲಗಿರಿ ಮರಗಳನ್ನು ಮಾತ್ರ ಬೆಳೆಸಿ, ಇತರ ಅರಣ್ಯ ವೃಕ್ಷಗಳನ್ನು ಬೆಳೆಸದೇ ಇದರ ಅಭಿವೃದ್ಧಿಯನ್ನು ಕಡೆಗಣಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ಅರಣ್ಯದಲ್ಲಿ ಪ್ರಕೃತಿದತ್ತವಾದ ಹಾಗೂ ಇಲ್ಲಿಗೆ ಹೊಂದಿಕೊಳ್ಳುವ ಸ್ಥಳೀಯ ಅರಣ್ಯ ವೃಕ್ಷಗಳನ್ನು ಬೆಳೆಸಿ ಈ ಕಾಡಿನಲ್ಲಿರುವ ಜಲಾಶಯದ ಪ್ರದೇಶವನ್ನು ಕಾಪಾಡಲು ಕ್ರಮ ತೆಗೆದು ಕೊಳ್ಳಲಾಗುವುದೇ ?

ಉ) ಇಲ್ಲಿರುವ ಕಾಡು ಪ್ರಾಣಿಗಳು ಯಾವುವು ಹಾಗೂ ಅವುಗಳ ಅಭಿವೃದ್ಧಿಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಮೇಲುಕೋಟೆ ಅಭಯಾರಣ್ಯವು ೪೯೮೨ ಹೆಕ್ಟೇರುಗಳಾಗಿರುತ್ತದೆ.

ಪಾಂಡವಪುರ ತಾಲ್ಲೂಕು ಳಳಳ ಹೆಕ್ಟೇರು ನಾಗಮಂಗಲ ಕೆ.ಆರ್. ಪೇಟೆ ತಾಲ್ಲೂಕುಗಳಂ ೪೫೩೪ ಹೆಕ್ಟೆಕರು.

ಆ) ಪ್ರಕೃತಿ ಸಂರಕ್ಷಣೆ ವಿಚಾರದಲ್ಲಿ ಕೇವಲ ಕಾವಲುಗಾರರ ವೇತನಕ್ಕಷ್ಟು ಹಣ ಮಂಜೂರಾಗಿರುವುದರಿಂದ ಕಾವಲು ಕಾರ್ಯಂವ ಕೆಲಸ ಬಿಟ್ಟು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡಿಲ್ಲ.

ಇ) ಈ ಭಾಗದಲ್ಲಿ ನೀಲಗಿರಿಯನ್ನೊಳಗೊಂಡ ಮಿಶ್ರ ಜಾತಿ ಮರಗಳನ್ನು ಬೆಳೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ) –ಹೌದು–

ಉ) ಈ ವನ್ಯ ಪ್ರಾಣಿ ಧಾಮದಲ್ಲಿ ಕೃಷ್ಣ ಮೃಗ, ಚಿರತೆ, ಕಾಡು ಹಂದಿ, ತೋಳ ಮತ್ತು ಸಣ್ಣ ವರ್ಗದ ಸಸ್ತನಿ ಪ್ರಾಣಿಗಳು ಹಾಗೂ ಪಕ್ಷಿಗಳು ಕಾಣ ಸಿಗುತ್ತವೆ, ಇವುಗಳನ್ನು ರಕ್ಷಿಸಲಾಗುತ್ತದೆ.

ಶ್ರೀ ಕೃಷ್ಣ.—ಸ್ವಾಮಿ, ಇದು ಒಂದಾನೊಂದು ಕಾಲದಲ್ಲಿ ದಟ್ಟ ಅರಣ್ಯವಾಗಿತ್ತು. ಈಗ ಅದು ಪೂರ್ಣವಾಗಿ ನಾಶವಾಗಿದೆ. ಈಗ ಅಲ್ಲಿ ನೀಲಗಿರಿಯನ್ನು ಹೆಡತಕ್ಕ ಕಾರ್ಯಕ್ರಮದ ಜೊತೆಗೆ ಕಾವಲುಗಾರರಿಗೆ ವೇತನ ಮಾತ್ರ ಮಂಜೂರಾಗಿದ್ದು ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮ ತೆಗೆದು ಕೊಂಡಿಲ್ಲವೆಂದು ಹೇಳಿದ್ದೀರಿ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ? ಮುಂದೆ ಇದನ್ನು ಏನಾದರೂ ಅಭಿವೃದ್ಧಿ ಮಾಡುತ್ತೀರಾ ?

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಮೊದಲು ತಿಳಿಸಿದ ಹಾಗೆ ನೀಲಗಿರಿ ಮರಗಳನ್ನೊಳಗೊಂಡ ಮಿಶ್ರ ಜಾತಿಯ ಮರಗಳನ್ನು ಅಲ್ಲಿ ಬೆಳೆಸಲು ಕ್ರಮ ತೆಗೆದು ಕೊಳ್ಳಲಾಗಿದೆ. ಇತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹಣದ ಕೊರತೆ ಇರುವುದರಿಂದ, ಮುಂದಿನ ಯೋಜನೆಯಲ್ಲಿ ಹಾಕಿಕೊಂಡು ಅಭಿವೃದ್ಧಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶಿಶಿಲ ಗ್ರಾಮದ ವಿದ್ಯುದ್ದೀಕರಣ

೯೩೪. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮದ ಒಂದು ಭಾಗಕ್ಕೆ ಸುಮಾರು ಮೂರು ವರ್ಷಗಳಿಂದ ವಿದ್ಯುತ್ ಮಾರ್ಗ ಎಳೆಯದಂತೆ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು ? ಶಿಶಿಲ ಗ್ರಾಮಕ್ಕೆ ವಿದ್ಯುತ್ತ ಮಾರ್ಗ ಎಳೆಯಲು ಅವಕಾಶ ಕಲ್ಪಿಸಲಾಗುವುದೇ ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೧ ಕೆ. ವಿ. ಮಾರ್ಗವನ್ನು ಅರಣ್ಯದಲ್ಲಿ ಹಾದು ಹೋಗುವುದಕ್ಕೆ ಬದಲಾಗಿ ರಸ್ತೆಯ ಪಕ್ಕದಲ್ಲಿ ಹಾಕಲಾಗಿತ್ತಿದೆ.

ಆ) ಶಿಶಿಲ ಗ್ರಾಮದಲ್ಲಿ ವಿದ್ಯುದ್ದೀಕರಣ ಕಾರ್ಯ ಪ್ರಗತಿಯಲ್ಲಿದೆ. ಅತಿ ಶೀಘ್ರವಾಗಿ ವಿದ್ಯುತ್ ಒದಗಿಸಲಾಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೇ, ರಾಜ್ಯದಲ್ಲಿ ಎಲ್ಲಾ ಕಡೆ ಕೂಡಾ ವಿದ್ಯುತ್ ಲೈನ್‌ಗಳನ್ನು ಅರಣ್ಯದಲ್ಲಿ ಹಾಕುತ್ತಿದ್ದಾರೆ. ಆದರೆ ಬೆಳ್ತಂಗಡಿಯಲ್ಲಿ ಮಾತ್ರ ಅರಣ್ಯದಲ್ಲಿ ವಿದ್ಯುತ್ ಲೈನ್ ತೆಗೆದುಕೊಂಡು ಹೋಗಬಾರದು ಎಂದು ಹೊಸದಾಗಿ ಕಾನೂನನ್ನು ಮಾಡಲಾಗಿದೆಯೇ ? ಈ ವಿಷಯವನ್ನು ಸತತವಾಗಿ ೩ ವರ್ಷಗಳಿಂದ ಈ ಸದನದಲ್ಲಿ ನಾನು ಕೇಳುತ್ತಾ ಬಂದಿದ್ದೇನೆ. ಈಗ ಮಾನ್ಯ ಮಂತ್ರಿಗಳು, ವಿದ್ಯುತ್ ಲೈನ್‌ಗಳನ್ನು ರಸ್ತೆ ಪಕ್ಕದಲ್ಲಿ ಹಾಕಲಾಗುತ್ತಿದೆ ಎಂದಿದ್ದಾರೆ. ಆದರೆ